# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 207
ಸದಸ್ಯರ ಹೆಸರು : ಶ್ರೀ ಎಂ ನಾಗರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 28.01.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಒಟ್ಟು ಜಮೀನು ಎಷ್ಟು; ಈ ಜಮೀನಿನಲ್ಲಿ ಎಷ್ಟು ಜಾಗವನ್ನು ಉಪಯೋಗಿಸಿಕೊಳ್ಳಲಾಗಿದೆ; ಮತ್ತು ಎಷ್ಟು ಜಾಗ ಅನುಪಯುಕ್ತವಾಗಿ ಉಳಿದುಕೊಂಡಿದೆ; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಟ್ಟು 1062 ಎಕರೆ 14 ಗುಂಟೆ ವಿಸ್ತೀರ್ಣದ ಸ್ವತ್ತು/ ಜಮೀನನ್ನು ಹೊಂದಿರುತ್ತದೆ. ಈ ಪೈಕಿ 401 ಎಕರೆ 09 ಗುಂಟೆ ಜಮೀನಿನಲ್ಲಿ 48 ಬಸ್ ನಿಲ್ದಾಣಗಳು, 50 ಬಸ್ ಘಟಕಗಳು, 04 ಕಾರ್ಯಾಗಾರ ಹಾಗೂ 260 ಅಧಿಕಾರಿ / ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಿಸಲಾಗಿರುತ್ತದೆ. ಉಳಿದಂತೆ 661 ಎಕರೆ 05 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಮುಂದಿನ ದಿನಗಳಲ್ಲಿ ಘಟಕ/ಬಸ್ ನಿಲ್ದಾಣ ನಿರ್ಮಿಸಲು ಕಾಯ್ದಿರಿಸಲಾಗಿದೆ.<br><br>ಪ್ರಸ್ತುತ Asset Monetization ಅಡಿಯಲ್ಲಿ ಪರಿಣಾಮಕಾರಿ ಬಳಕೆಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ. | ಸದರಿ ಸಂಸ್ಥೆಯ ಒಟ್ಟು ಜಮೀನಿನಲ್ಲಿ ಎಷ್ಟು ಜಮೀನು ಮೊಕದ್ದಮೆಯಲ್ಲಿದೆ; ಸದರಿ ಮೊಕದ್ದಮೆಗಳು ಯಾವ ವರ್ಷಗಳಿಂದ ಬಾಕಿ ಇವೆ ಮತ್ತು ಎಷ್ಟು ಪ್ರಕಾರಗಳು ಇತ್ಯರ್ಥಗೊಂಡಿವೆ; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಜಮೀನುಗಳಲ್ಲಿ ಒಟ್ಟು 32 ಜಮೀನುಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 96 ಪ್ರಕರಣಗಳು ದಾಖಲಾಗಿರುತ್ತವೆ. ಇದರಲ್ಲಿ 43 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಈ ಪೈಕಿ 41 ಪ್ರಕರಣಗಳು ಸಂಸ್ಥೆಯ ಪರ ಇತ್ಯರ್ಥವಾಗಿರುತ್ತವೆ. ಉಳಿದಂತೆ 53 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿಯಿದ್ದು, 2013 ರಿಂದ 2025ರವರೆಗೆ ಬಾಕಿ ಇರುವ ಪ್ರಕರಣಗಳ ಮಾಹಿತಿ ಈ ಕೆಳಕಂಡಂತಿವೆ:<br><br>ಕ್ರ.ಸಂ / ವರ್ಷ / ಬಾಕಿ ಪ್ರಕರಣಗಳ ಸಂಖ್ಯೆ<br>1 / 2013 / 03<br>2 / 2014 / 02<br>3 / 2016 / 05<br>4 / 2018 / 02<br>5 / 2019 / 01<br>6 / 2020 / 01<br>7 / 2021 / 08<br>8 / 2022 / 08<br>9 / 2023 / 03<br>10 / 2024 / 07<br>11 / 2025 / 13<br>ಒಟ್ಟು / 53 |
| ಇ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸುಪರ್ದಿಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳು ಇವೆ; ಈ ಬಸ್‌ಗಳಲ್ಲಿ ಬಿ.ಎಂ.ಟಿ.ಸಿ. ಒಡೆತನದ ಬಸ್‌ಗಳು ಮತ್ತು ಖಾಸಗಿ ಒಡೆತನದ ಬಸ್‌ಗಳು ಎಷ್ಟು; | ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸುಪರ್ದಿಯಲ್ಲಿ 1696 ವಿದ್ಯುತ್ ಚಾಲಿತ ಬಸ್ಸುಗಳು ಜಿ.ಸಿ.ಸಿ.(gross cost contract) ಮಾದರಿಯಲ್ಲಿ ಆಚರಣೆ ಮಾಡಲಾಗುತ್ತಿದ್ದು, ಸಂಸ್ಥೆಯ ಒಡೆತನದಲ್ಲಿ ಯಾವುದೇ ಬಸ್ಸುಗಳು ಇರುವುದಿಲ್ಲ. |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ.</td><td>ಬೆಂಗಳೂರು ನಗರ ಅಂದಾಜು ಜನಸಂಖ್ಯೆ ಒಟ್ಟು 1 ಕೋಟಿ 40 ಲಕ್ಷದಷ್ಟಿದ್ದು, ಈ ಜನಸಂಖ್ಯೆ ಅನುಗುಣವಾಗಿ ಬಸ್ಸುಗಳನ್ನು ಪೂರೈಸಲು ಯಾವ ರೀತಿಯ ಅಧ್ಯಯನ ನಡೆಸಲಾಗುತ್ತಿದೆ? (ಮಾಹಿತಿ ನೀಡುವುದು).</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 6,299 ಅನುಸೂಚಿಗಳನ್ನು 66,274 ಸುತ್ತುವಳಿಗಳೊಂದಿಗೆ 13.06 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಪ್ರಸ್ತುತ ಸರಾಸರಿ 45 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.<br><br>ಅಲ್ಲದೇ, ಪ್ರಸ್ತುತ ಸಂಸ್ಥೆಯಲ್ಲಿ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ, ಮೂಲಭೂತ ಸೌಕರ್ಯಗಳ ಲಭ್ಯತೆಗನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಮತ್ತು ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ನಿರಂತರವಾಗಿ ಪರಿಷ್ಕರಿಸಲಾಗುತ್ತಿದೆ.<br><br>ಬೆಂ.ಮ.ಸಾ.ಸಂಸ್ಥೆಯ 25 ಕಿ.ಮೀ. ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (GBA) ವ್ಯಾಪ್ತಿಯ ಗಡಿಯಿಂದ 40 ಕಿ.ಮೀ. ರವರೆಗೆ ವಿಸ್ತರಿಸಿ ಅಧಿಸೂಚನೆ ಸಂಖ್ಯೆ: ಟಿಡಿ 167 ಟಿಡಿಒ 2025, ದಿನಾಂಕ:05.01.2026ರನ್ವಯ ಆದೇಶಿಸಲಾಗಿದೆ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-<br><table>
<tr><th>ಸಂಸ್ಥೆ</th><th>2023-24(Jan)</th><th>2024-25</th><th>2025-26</th><th>ಒಟ್ಟು</th></tr>
<tr><td rowspan="2">ಬೆಂ.ಮ.ಸಾ.ಸಂಸ್ಥೆ</td><td>20 ಡೀಸೆಲ್</td><td>820 ಡೀಸೆಲ್</td><td>-</td><td>840</td></tr>
<tr><td>341 ಇ.ವಿ</td><td>755 ಇ.ವಿ</td><td>346 ಇ.ವಿ</td><td>1442</td></tr>
<tr><td>ಒಟ್ಟು</td><td>361</td><td>1575</td><td>346</td><td>2282</td></tr>
</table><br>ಮುಂದುವರೆದು, ಕೇಂದ್ರ ಸರ್ಕಾರದ PM-E Drive ಯೋಜನೆಯಡಿಯಲ್ಲಿ 4500 ಎಲೆಕ್ಟ್ರಿಕ್ ವಾಹನಗಳನ್ನು ಬೆಂ.ಮ.ಸಾ.ಸಂಸ್ಥೆಗೆ ಕಾರ್ಯಾಚರಣೆ ಮಾಡಲು ಯೋಜಿಸಲಾಗಿದ್ದು, ಸದರಿ ವಾಹನಗಳ ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ.<br><br>ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಸೇವೆ ವಿಸ್ತರಣೆಗೆ ಅನುಗುಣವಾಗಿ ಮೆಟ್ರೋ ಫೀಡರ್ ಸೇವೆಗಳನ್ನು ಕಾರ್ಯಾಚರಣೆಗೊಳಿಸುತ್ತಿದ್ದು, ಪ್ರಸ್ತುತ 68 ಮಾರ್ಗಗಳಲ್ಲಿ 236 ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಅಲ್ಲದೇ, ವಿದ್ಯಾರ್ಥಿ ಸಮುದಾಯ/ ಸಾರ್ವಜನಿಕ ಪ್ರಯಾಣಿಕರು/ ಸಂಘ</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸಂಸ್ಥೆಗಳು/ ಜನಪ್ರತಿನಿಧಿಗಳು ಇತ್ಯಾದಿ ಮೂಲಗಳಿಂದ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡುವ ಯಾವುದೇ ಪ್ರದೇಶಕ್ಕೆ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಅಥವಾ ಹೆಚ್ಚಿಸುವಂತೆ ಮನವಿಗಳು ಬಂದಲ್ಲಿ, ಮಾರ್ಗ ಸಮೀಕ್ಷೆ, ಪ್ರಯಾಣಿಕರ ಸಂಚಾರ ಇತ್ಯಾದಿಗಳನ್ನು ಅಭ್ಯಸಿಸಿ, ಸಾರಿಗೆ ಸೌಲಭ್ಯವನ್ನು ಒದಗಿಸುವ ಸಾಧ್ಯಾಸಾಧ್ಯತೆಗಳ ಅಧ್ಯಯನ ನಡೆಸುವ ಪ್ರಕ್ರಿಯೆಯು ಸಹ ಜಾರಿಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 04 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು